**ಉಚಿತ ಪ್ರತಿಗಳಿಗಾಗಿ ಮತ್ತು ಉಚಿತ ಪತ್ರಿಕೆಗಳಿಗಾಗಿ**

**ನಮ್ಮ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ**




**ಸತ್ಯವೇದದಲ್ಲಿನ ವಿಷಯಗಳ ಬಗ್ಗೆ ಹೆಚ್ಚಿನ ವಿವರ ಹಾಗೂ ಅಂಚೆ ಮೂಲಕ ಉಚಿತವಾಗಿ ಪಾಠಗಳನ್ನು ಪಡೆಯಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಬಹುದು**


ನಮ್ಮ ವಿಳಾಸ :

**ದ ಕ್ರಿಸ್ಟಡೆಲ್ಫಿಯನ್ಸ್**

ಅಂಚೆ ಪೆಟ್ಟಿಗೆ ಸಂಖ್ಯೆ 535, ಫ್ರೇಜರ್ ಟೌನ್

ಬೆಂಗಳೂರು - 560 005




# ನೂತನ ಸೃಷ್ಟಿ

ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು


**ಸಂಚಿಕೆ 16**


* ನಂಬಿಕೆಗಳ ಸಾರಾಂಶ
* ದೇವರ ಹೊಸ ಸಮಾಜ (ಭಾಗ–2)
* ಉರುಲು
* ಕುಗ್ಗಿಹೋಗಿರುವೆಯಾ?
* ಇಸಾಕ–ಅಬ್ರಹಾಮನ ಮಗ

## ಕ್ರಿಸ್ಟಡೆಲ್ಫಿಯನ್ಸರು ಎಂದರೆ ಯಾರು?

ಕ್ರಿಸ್ಟಡೆಲ್ಫಿಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೊಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಅಧಾರವಾಗಿ ಜೀವನವನ್ನು ನೆಡೆಸುವವರಾಗಿದ್ದೇವೆ.

ನಾವು ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾಯ, ನೀತಿ ಮತ್ತು ಶಾಂತಿಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬವುಗಳೇ.

**Co-ordinator : Linus Daniel**

**e-mail :**
**info@choose2live.info**
http://www.choose2live.info/noothana_shristi

**Contact:**
The Christadelphians,
P.O.Box No 535,
Bangalore 560 005,
India.

ನಿಮ್ಮನ್ನು ಈ ಪತ್ರಿಕೆಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿಯಾಗಿದೆ.

ಈ ಪತ್ರಿಕೆಯಲ್ಲಿರುವ ಎಲ್ಲಾ ವಸ್ತುವಿಷಯಗಳನ್ನು ಕ್ರಿಸ್ಟಡೆಲ್ಫಿಯನ್ನರ ಆಂಗ್ಲ ಭಾಷೆಯ ವಿಷಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.

ನೂತನ ಸೃಷ್ಟಿ ಪತ್ರಿಕೆಯ ತಂಡ

ಲೀನಸ್ ಡ್ಯಾನಿಯಲ್ : ಸಂಯೋಜಕರು.

ಸುಧೀರ್ ಬಿ.ಜಿ : ಪುನರವಲೋಕನ, ಮತ್ತು ಡಿ.ಟಿ.ಪಿ ಸಂಯೋಜಕರು.

ರೀಟಾ ಸತ್ಯರಾಜ್
ಕಿರಣ್ } ಭಾಷಾಂತರಕಾರರು

*"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]*



# ನಂಬಿಕೆಗಳ ಸಾರಾಂಶ

ಅಪೋಸ್ತನಾದ ಪೌಲನು ಎಫೆಸದ ವಿಶ್ವಾಸಿಗಳಿಗೆ ಬರೆಯುತ್ತಾ ಅವರು ಸ್ವೀಕಾರ ಮಾಡಿರುವ **"ಏಳು ಒಂದೇ ಅಂಶ"**ಗಳನ್ನು ಆಧರಿಸಿ, ಮಾನಸಿಕ ಒಗ್ಗಟ್ಟಿನಿಂದಲೂ, ಪರಸ್ಪರ ಅನ್ಯೋನ್ಯತೆಯಿಂದಲೂ ಇರಬೇಕೆಂದು ಪೌಲನು ಕರೆಕೊಟ್ಟಿದ್ದಾನೆ: "ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು, ಒಬ್ಬನೇ ಆತ್ಮನನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು; ನಿಮ್ಮೆಲ್ಲರಿಗೂ ಕರ್ತನು ಒಬ್ಬನೇ, ಭರವಸವು ಒಂದೇ, ಸ್ನಾನದೀಕ್ಷೆ ಒಂದೇ, ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ; ಆತನು ಎಲ್ಲರ ಮೇಲಿರುವವನೂ, ಎಲ್ಲರ ಮುಖಾಂತರ ಕಾರ್ಯನಡೆಸುವವನೂ, ಎಲ್ಲರಲ್ಲಿ ವಾಸಿಸುವವನೂ ಆಗಿದ್ದಾನೆ" (ಎಫೆಸ 4:4–6).

ಈ ಏಳು **"ಒಂದೇ"** ಎಂಬುವ ಎಣಿಕೆಯು **"ವಿಶ್ವಾಸದ ಸಾರಂಶ"**ದ ಸ್ಪಷ್ಟ ಚಿತ್ರವಾಗಿರುವುದರೊಂದಿಗೆ ವಿಶ್ವಾಸದ ಶಾಸ್ತ್ರೀಯ ಹೇಳಿಕೆಯೂ ಆಗಿದೆ. ತಮ್ಮ ಕಾಲದ ವಿಶ್ವಾಸಿಗಳ ಸಭೆಗಳಿಗೆ ತಿಳಿದಿದ್ದ ಸಿದ್ಧಾಂತಗಳ ಸಾರಾಂಶವನ್ನೇ ಚಿಕ್ಕದಾಗಿ ಚೊಕ್ಕವಾಗಿ ಪೌಲನು ತಿಳಿಸಿದ್ದಾನೆ ಎಂದು ಕೆಲವು ಬರಹಗಾರರು(ಮಾರ್ಕಸ್ ಬಾರ್ಥ್–"ಎಫೆಸ4–6", ಸಹಯೋಗಿ ಬೈಬಲ್ ಪುಟಗಳು 462, 463; ಆಲ್‌ಫ್ರೆಡ್ ಬ್ಯಾರಿ, "ಎಫೆಸದವರು", ಎಲಿಕಾಟ್ 8:36; ಫ್ರಾನ್ಸಿಸ್ ಫೋಕ್ಸ್–"ಪೌಲನು ಎಫೆಸದವರಿಗೆ ಬರೆದ ಪತ್ರಿಕೆ"; ಟಿಂಡೇಲ್ ಹೊಸ ಒಡಂಬಡಿಕೆಯ ಟೀಕೆಗಳು, ಪುಟ 112) ಭಾವಿಸಿದ್ದಾರೆ.

**01. ಒಂದೇ ಶರೀರ**
**02. ಒಂದೇ ಆತ್ಮ**
**03. ಒಂದೇ ನಿರೀಕ್ಷೆ**
**04. ಒಬ್ಬನೇ ಕರ್ತನು**
**05. ಒಂದೇ ವಿಶ್ವಾಸ**
**06. ಒಂದೇ ದೀಕ್ಷಾಸ್ನಾನ**
**07. ಒಬ್ಬನೇ ದೇವರು.**

ಪೌಲನು ಇತರ ಬರಹಗಳಲ್ಲೂ ಇದೇ ಪದಗಳನ್ನು ಉಪಯೋಗಿಸಿರುವುದರಿಂದ ಹೋಲಿಕೆಯ ಮೂಲಕ ಇವನ್ನು ಅರ್ಥೈಸಬಹುದು. ಇದರಿಂದ ಅವಶ್ಯ



ಸಿದ್ಧಾಂತಗಳ ನಂಬಲರ್ಹ ಹೇಳಿಕೆಗಳುಂಟಾಗುತ್ತವೆ. ನಾವು ನಂಬುವ ಸ್ಪಷ್ಟ ಸತ್ಯಗಳನ್ನು ಇದು ವಿವರಿಸುತ್ತದೆ ಮತ್ತು ಈ ಸತ್ಯದ ವ್ಯವಸ್ಥೆಯನ್ನು ಇತರ ಸತ್ಯವಲ್ಲದವುಗಳಿಂದ ಬೇರ್ಪಡಿಸುತ್ತದೆ.

## 01. ಒಂದೇ ಶರೀರ :-

ಎಲ್ಲಾ ವಿಶ್ವಾಸಿಗಳ ಐಕ್ಯವು, ಅದರಲ್ಲೂ ಯೆಹೂದ್ಯರ ಮತ್ತು ಅನ್ಯಜನಗಳ ಐಕ್ಯವು ಒಂದೇ ಆಧಾರದ ಮೇಲೆ ದೇವರೊಂದಿಗೆ ಸಮಾಧಾನ ಮಾಡಿಸಿದೆ(ಎಫೆಸ 2:16). ಕ್ರಿಸ್ತನೇ ಶಿರಸ್ಸಾಗಿ ನಾವೆಲ್ಲಾ ಪ್ರೀತಿಯಿಂದ ಒಂದಾದ ಶರೀರ(ಎಫೆಸ 4:12-16, ರೋಮಾ12:1,4,5; 1ಕೊರಿಂಥ 12:12-27) ಮತ್ತು "ಮಹಾಮರ್ಮ"ವಾದ ಕ್ರಿಸ್ತ ಮತ್ತು ಸಭೆ/ವಿಶ್ವಾಸಿಗಳು "**ಪತಿ**" ಹಾಗೂ "**ಪತ್ನಿ**"ಯಂತೆ ಒಂದೇ ಶರೀರ(ಎಫೆಸ 5:23, 28, 30). ಕೊನೆಯದಾಗಿ ಒಂದೇ ಶರೀರವಾದ ಸಭೆಯು ಒಂದೇ ರೊಟ್ಟಿಯಾದ ಕ್ರಿಸ್ತನಲ್ಲಿ ಪಾಲು ಹೊಂದಲು ಒಟ್ಟುಗೂಡುತ್ತೇವೆ(1ಕೊರಿಂಥ 10:16-17, 11:24, 27, 29). ಹೀಗೆ "**ಒಂದೇ ಶರೀರ**" ಎನ್ನುವುದು ವಿಶ್ವಾಸಿಗಳನ್ನು ಆಂತರಿಕವಾಗಿಯೂ(ನಿಜವಾದ ವಿಶ್ವಾಸಿಗಳೆಲ್ಲರ ಸದಸ್ಯತ್ವ) ಮತ್ತು ಅನನ್ಯವಾಗಿಯೂ(ಇವರಲ್ಲದೆ ಅನ್ಯರು ಯಾರೂ ಸದಸ್ಯರಾಗದೆ ಇರುವುದು) ಐಕ್ಯತೆಯ ಆಧಾರದ ಮೇಲೆ ವಿವರಿಸುತ್ತದೆ.



## 02. ಒಂದೇ ಆತ್ಮ :-

ಪ್ರವಾದಿಗಳಿಗೂ, ಅಪೋಸ್ತರಿಗೂ ಒಂದೇಸತ್ಯವನ್ನು ಅಂಕಿತಗೊಳಿಸಲು, ಧರ್ಮಶಾಸ್ತ್ರವನ್ನು ಬರೆಯಲು, ಪ್ರಮಾಣಿಸಲು ಮತ್ತು ರಕ್ಷಿಸಲು ಸ್ಫೂರ್ತಿದಾಯಕವದ ದೇವರ ಪವಿತ್ರಶಕ್ತಿ ಅಥವಾ ಸತ್ಯಾತ್ಮ ಯೇಸುಕ್ರಿಸ್ತನ ಉಪದೇಶಗಳನ್ನು ವಿಶದೀಕರಿಸಲು ಅಥವಾ ವಿವರಿಸಲು ಅಥವಾ ತಿಳಿಸಿಕೊಡಲು ಅಪೋಸ್ತಲರಿಗೆ ಕೊಡಲ್ಪಟ್ಟಿತು(ಯೋಹಾನ 14:17, 26; 15:26, 16:13). ಒಬ್ಬನೇ ಆತ್ಮ ಇರುವುದರಿಂದ, ಇನ್ನಿತರ ಆತ್ಮಗಳಿದ್ದರೆ, ಮತ್ತು ಅಪೋಸ್ತಲರು ಸ್ವೀಕರಿಸಿ ಉಪದೇಶಿಸಿದ ಸುವಾರ್ತೆಗಿಂತ ಬೇರೆಯಾದ ಸಿದ್ಧಾಂತಗಳನ್ನು ಬೋಧಿಸಿದರೆ, ಅವು ಸುಳ್ಳು ಆತ್ಮ/ಗುರುಗಳಾಗುತ್ತಾರೆ(ಗಲಾತ್ಯ 1:8-10, 1ತಿಮೊಥೆ 4:11, 1ಯೋಹಾನ 4:1-3).



## 03. ಒಂದೇ ನಿರೀಕ್ಷೆ :-

ಪೌಲನು ಇನ್ನೊಂದುಕಡೆ ಈ ರೀತಿಯಾಗಿ ತಿಳಿಸಿದ್ದಾನೆ –"ಒಂದೇ ನಿರೀಕ್ಷೆಯೆಂದರೆ, ಪುನರುತ್ಥಾನದ ನಿರೀಕ್ಷೆಯೇ ಆಗಿದೆ" (ಅ.ಕೃ. 23:6, 24:14-15). ಇದು ನಮ್ಮ ಪೂರ್ವಜರಿಗೆ ಇಸ್ರಾಯೇಲ್ಯರ ರಾಜ್ಯದ ಪುನಃಸ್ಥಾಪನೆಯ ಬಗ್ಗೆ ಮಾಡಿದ ವಾಗ್ದಾನವು ನೆರವೇರುವ ನಿರೀಕ್ಷೆಯಾಗಿದೆ(2ಸಮುವೇಲ 7:12-14; ಅ.ಕೃ.1:6, 26:6-8; ಲೂಕ 1:30-33; ರೋಮಾಪುರದವರಿಗೆ 4:13-18). ಹೀಗೆ "**ಒಂದೇ ನಿರೀಕ್ಷೆ**"ಯು ಯೇಸುಕ್ರಿಸ್ತನ ಬರುವಿಕೆ ಮತ್ತು ಅವನ ರಾಜ್ಯವಾಗಿರಬೇಕು(ಅ.ಕೃ. 1:11; ಕೊಲೊಸ್ಸೆ 1:5, ತೀತ 2:13) ಮತ್ತು ನಿತ್ಯಜೀವದ ಬಗೆಗಿನ ನಿರೀಕ್ಷೆಯಾಗಿರಬೇಕು(ತೀತ 1:2, 3:7). "**ಕ್ರಿಸ್ತ**"ನಿಲ್ಲದ ಜನಕ್ಕೆ "ನಿರೀಕ್ಷೆಯೂ ಇಲ್ಲ" (ಎಫೆಸ 2:12).



## 04. ಒಬ್ಬನೇ ಕರ್ತ :-

ಪೌಲನ ಬರಹಗಳಲ್ಲಿ ಕರ್ತನ ಕುರಿತಾದ ಉಲ್ಲೇಖಗಳು ನಾವು ಇಲ್ಲಿ ಪಟ್ಟಿಮಾಡಲಾಗದಷ್ಟು ಹೆಚ್ಚಾಗಿವೆ. ಆದರೆ "**ಒಬ್ಬನೇ ಕರ್ತನ**" ಬಗೆಗಿನ ಸತ್ಯವೇದ ಉಪದೇಶಗಳ ಸಾರವನ್ನು ಸಂಕ್ಷಿಪ್ತವಾಗಿ ಬರೆಯಬಹುದು. ಯೇಸುಕ್ರಿಸ್ತನು "ಒಬ್ಬನೇ ಕರ್ತ" ಆಗಿದ್ದಾನೆ, ಏಕಂದರೆ ಯೇಸುಕ್ರಿಸ್ತ ದೇವರ ಏಕಮಾತ್ರ ಪುತ್ರನಾಗಿದ್ದು ಪ್ರಪಂಚದ ಎಲ್ಲಾ ವಿಶ್ವಾಸಿಗಳ ಮಧ್ಯಸ್ತಗಾರನಾಗಿದ್ದಾನೆ ಮತ್ತು ಸಭೆಗೆ ಶಿರಸ್ಸಾಗಿದ್ದಾನೆ(ಎಫೆಸ 4:11-16, 2ಕೊರಿಂಥ 5:14-17). ಮಾನವರಲ್ಲಿ ಸಂಪೂರ್ಣ ಪರಿಶುದ್ಧನಾಗಿ ಮತ್ತು ದೇವರಿಗೆ ಸಂಪೂರ್ಣ ವಿಧೇಯನಾಗಿ ಜೀವಿಸಿದ ಏಕೈಕ ವ್ಯಕ್ತಿಯಾಗಿದ್ದಾನೆ.



ಆದುದರಿಂದಲೇ ಎಲ್ಲಾ ಮಾನವರ ಪರಿಪೂರ್ಣ ಪ್ರಾತಿನಿಧಿಕ ಬಲಿಅರ್ಪಣೆಯಾಗಿ ಕೊಡುವ ಸಾಮರ್ಥ್ಯವಿದ್ದ ಒಬ್ಬನೇ ವ್ಯಕ್ತಿ ಯೇಸುಕ್ರಿಸ್ತ ಆಗಿದ್ದಾನೆ. ಆದ್ದರಿಂದ ಆತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟು(ಫಿಲಿಪ್ಪಿ 2:8–12), ಆತನಲ್ಲಿ ನಿತ್ಯಜೀವ ಹೊಂದಲಿದ್ದ ಎಲ್ಲರ ಶಿರಸ್ಸು ಆದನು(ರೋಮಾ 5:12, 18–19).

## 05. ಒಂದೇ ವಿಶ್ವಾಸ :–

ಶಿಲುಬೆಗೇರಿಸಲ್ಪಟ್ಟು ಪುನರುತ್ಥಾನ ಹೊಂದಿದ ಕ್ರಿಸ್ತನಲ್ಲಿನ ವಿಶ್ವಾಸವು ನಿತ್ಯಜೀವ ಹೊಂದುವುದಕ್ಕೆ ಇರುವ ಏಕೈಕ ಸಾಧನವಾಗಿದೆ(ಅ.ಕೃ. 4:12, ರೋಮಾ 3:22–31, ಗಲಾತ್ಯ 3:29–29) ಇಂತಹ ವಿಶ್ವಾಸದಿಂದ(ಪೂರ್ವಭಾವಿಯಾಗಿ) ಅಬ್ರಹಾಮನು ಸಹ ಸಮರ್ಥಿಸಲ್ಪಟ್ಟನು, ಅಥವಾ ನೀತಿವಂತನೆಂದು ಲೆಕ್ಕಿಸಲ್ಪಟ್ಟನು(ರೋಮಾ 4:1–5, 3:25, ಇಬ್ರಿಯ 9:15) ನೀತಿವಂತಿಕೆಯು ಜೊತೆಯಲ್ಲಿ(ಎಫೆಸ 2:8–9) ನಂಬಿಕೆಯಿಂದಲೂ ಪಾಪಗಳು ಕ್ಷಮಿಸಲ್ಪಡಬಹುದು(ರೊಮಾ 4:6–8).



## 06. ಒಂದೇ ದೀಕ್ಷಾಸ್ನಾನ :–

ಪಟ್ಟಿಯಲ್ಲಿ ವಿವರಿಸಲ್ಪಟ್ಟಂತೆ ಒಂದೇ ಸುವಾರ್ತೆಯ ಮೇಲಿನ ನಂಬಿಕೆಯಿಂದ ಪಡೆಯುವ ಒಂದೇ ದೀಕ್ಷಾಸ್ನಾನ(ಅಂದರೆ ನಿಜವಾದ ದೀಕ್ಷಾಸ್ನಾನ ಮಾತ್ರ). ಪೌಲನಿಗೆ ಒಂದು ಬಗೆಯ ದೀಕ್ಷಾಸ್ನಾನ ಮಾತ್ರ ತಿಳಿದಿತ್ತು; ನೀರಿನಲ್ಲಿ ಹೂಣಲ್ಪಡುವುದು(ರೋಮಾ 6:3–4, ಕೊಲೊಸ್ಸೆ 2:12). ವಿಶ್ವಾಸಿಗಳು ಅಬ್ರಹಾಮ ಮತ್ತವನ ಸಂತತಿಗೆ ಮಾಡಲ್ಪಟ್ಟ ವಾಗ್ದಾನಗಳಿಗೆ ದೀಕ್ಷಾಸ್ನಾನದ ಮೂಲಕ ಉತ್ತಾರಾಧಿಕಾರಿಗಳಾಗುತ್ತಾರೆ(ಗಲಾತ್ಯ 3:27–29).

## 07. ಒಬ್ಬನೇ ದೇವರು :–

ಪೌಲನು ತಿಳಿಸಿರುವ ಏಳು ಐಕ್ಯಗಳ ಪಟ್ಟಿಯಲ್ಲಿ ಕೊನೆಯದಾದರೂ ವಾಸ್ತವವಾಗಿ ಇದೇ ಮೊದಲನೆಯ ಹಾಗೂ ಎಲ್ಲಕ್ಕಿಂತ ಶ್ರೇಷ್ಠವಾದ ಐಕ್ಯವಾಗಿದೆ ಮತ್ತು ಇದರಿಂದಲೇ



ಬೇರೆಲ್ಲಾ ಐಕ್ಯಗಳು ಹುಟ್ಟಿವೆ. ಸಕಲಸೃಷ್ಟಿಗೆ ಮೂಲಕಾರಣನಾದ **ಏಕದೇವರು**(1ಕೊರಿಂಥ 8:6, ಗಲಾತ್ಯ 3:19–20, 1ತಿಮೊಥೆ 2:5) ತನ್ನ ಒಬ್ಬನೇ ಮಗನ ಮೂಲಕ ಪ್ರಕಟಪಡಿಸಿದಂತೆ ತನ್ನ ಪ್ರೀತಿಯ ಮುಖಾಂತರ ಎಲ್ಲರನ್ನೂ ಒಳಗೊಂಡಿದ್ದಾನೆ(ಎಫೆಸ 3:14–21).



ಎಫೆಸದವರಿಗೆ ಬರೆದ ಪತ್ರಿಕೆ 4ನೆಯ ಅಧ್ಯಾಯದ ಮೂಲಕ ಪೌಲನು ಅಂದು ಎಫೆಸ ಸಭೆಯ ವಿಶ್ವಾಸಿಗಳಿಗೆ ಒಂದೇ ನಂಬಿಕೆ, ನಿರೀಕ್ಷೆಗಳಿಗೆ ಆಧಾರವನ್ನು ಕೊಟ್ಟಿದ್ದಾನೆ. ಅದು ಕೇವಲ ಅವರಿಗೆ ಮಾತ್ರವಲ್ಲ ಇಂದಿಗೂ ಕೂಡ ನಂಬಿಕೆಯಿಡುವ ಎಲ್ಲಾ ವಿಶ್ವಾಸಿಗಳಿಗೂ ನಂಬಿಕೆಯ ಸಾರಾಂಶವಾಗಿದೆ. ಆತನು ತಿಳಿಸಿರುವ ವಾಕ್ಯಗಳನ್ನು ಮತ್ತೊಮ್ಮೆ ನೋಡುವಾಗ ವಿಶ್ವಾಸಿಗಳೆಲ್ಲರಿಗೂ ಆತ ತಿಳಿಸುವುದೇನೆಂದರೆ– “ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು, ಒಬ್ಬನೇ ಆತ್ಮನನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು, ನಿಮ್ಮೆಲ್ಲರಿಗೂ ಕರ್ತನು ಒಬ್ಬನೇ; ಭರವಸವು ಒಂದೇ, ಸ್ನಾನದೀಕ್ಷೆ ಒಂದೇ, ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ; ಆತನು ಎಲ್ಲರ ಮೇಲಿರುವವನೂ, ಎಲ್ಲರ ಮುಖಾಂತರ ಕಾರ್ಯನಡೆಸುವವನೂ, ಎಲ್ಲರಲ್ಲಿ ವಾಸಿಸುವವನೂ ಆಗಿದ್ದಾನೆ”.



# ದೇವರ ಹೊಸ ಸಮಾಜ

## (ಭಾಗ–2)

ಈ ಸರಣಿಯ ಹಿಂದಿನ ಲೇಖನದಲ್ಲಿ ಟಾಮ್ ಬಾರ್ಲಿಂಗ್ ರವರು ನಮ್ಮನ್ನು ಕಾಲಯಂತ್ರದಲ್ಲಿ ಕುಳಿತು, ಪ್ರಥಮ ಶತಮಾನಕ್ಕೆ ಕಲ್ಪನಾಯಾತ್ರೆ ಮಾಡಿಸಿ ಕೊಲೊಸ್ಸೆ ಎಂಬ ಪಟ್ಟಣವನ್ನು ಸಂದರ್ಶಿಸಲು ಉತ್ತೇಜಿಸಿದ್ದರು. ಅಲ್ಲಿ ಫಿಲೆಮೋನನೆಂಬಾತನ ವಿಶಾಲ ಬಂಗಲೆಯಲ್ಲಿ ಓಡಿಹೋಗಿದ್ದ ದಾಸ ಒನೇಸಿಮನ ಸಂಗಡವಿದ್ದ ಫಿಲೆಮೋನನನ್ನು ಕಂಡಿದ್ದೆವು. ಓಡಿಹೋಗಿದ್ದ ದಾಸನು ಯಜಮಾನನ ಮನೆಗೆ ಹಿಂದಿರುಗಿದ್ದನು ಮತ್ತು ಯಜಮಾನನು ಅವನನ್ನು ಮರಳಿ ಸ್ವೀಕರಿಸಿದ್ದನು. ಅಂದಿನ ಕಾಲಕ್ಕೆ ಇದೊಂದು ವಿಶೇಷ ಫಲಿತಾಂಶವಾಗಿದ್ದು ನೂತನ ಸಮಾಜವೊಂದು ರೂಪುಗೊಳ್ಳುತ್ತಿದ್ದುದರ ದ್ಯೋತಕವಾಗಿತ್ತು.

### ಫಿಲೆಮೋನ ಮತ್ತು ಒನೇಸಿಮ :–

ಏನು ನೆಡೆದಿಲ್ಲವೆಂಬಂತೆ, ಯಜಮಾನನಿಂದ ಕದ್ದುಪರಾರಿಯಾದ ಒನೇಸಿಮನೂ, ಆತನನ್ನು ಕ್ಷಮಿಸಿ ಸ್ವೀಕರಿಸಿದ ಫಿಲೆಮೋನನೂ ಆ ಬಂಗಲೆಯಲ್ಲಿ ಒಟ್ಟಿಗಿರುವುದು ಮಾತ್ರವಲ್ಲ, ಕರ್ತನ ಕಡೇ ಭೋಜನದ ಆಚರಣೆಯ ರೊಟ್ಟಿ ಮತ್ತು ದ್ರಾಕ್ಷಾರಸದಲ್ಲಿ ಪಾಲು ಹೊಂದುವುದರಲ್ಲಿ ನಿರತರಾಗಿದ್ದರು. ಇಂತಹದೊಂದು ಆಶ್ಚರ್ಯಕರ ಘಟನೆ ಸಂಭವಿಸಿದ್ದು ಹೇಗೆ? ಈ ಪ್ರಶ್ನೆಗೆ ಉತ್ತರ ಹುಡುಕಲು ನಾವು ಯೇಸುಕ್ರಿಸ್ತನ ಬೋಧನೆಗಳತ್ತ ತಿರುಗಬೇಕು. ಯೇಸುಕ್ರಿಸ್ತನು ಸಾರ್ವಜನಿಕವಾಗಿ ತನ್ನ ಸುವಾರ್ತಾ ಪ್ರಚಾರವನ್ನು ತೊಡಗುವುದಕ್ಕೆ ಮೊದಲು ಮಾಡಿದ ಸುದೃಢ ವ್ಯಕ್ತಿತ್ವವೊಂದರಿಂದ ನಮ್ಮ ಶೋಧ ಕಾರ್ಯವನ್ನು ಪ್ರಾರಂಭಿಸಬೇಕು.

### ಸ್ನಾನಿಕನಾದ ಯೋಹಾನನು :–



ಯೋಹಾನನು ಯೆರೂಸಲೇಮಿನ ದೇವಾಲಯದಲ್ಲಿ ಯಾಜಕನಾಗಬಹುದಿತ್ತು, ಆದರೆ ಅದಕ್ಕೆ ಬದಲಾಗಿ ಆತನು ಜನರಿಂದ ದೂರವಾಗಿ ಕಾಡಿನಲ್ಲಿ ಜೀವಿಸುವ ಜೀವನವನ್ನು ಆರಿಸಿಕೊಂಡನು. ಆತನು ಅಲ್ಲಿಂದ ಯೆಹೂದ್ಯರ



ಮುಂದೆ ಕಾಣಿಸಿಕೊಂಡು ದೀಕ್ಷಾಸ್ನಾನ ಪಡೆದು ಕ್ಷಮೆ ಹೊಂದುವಂತೆ ಕರೆಯಿತ್ತನು. ‘‘ಆ ದಿನಗಳಲ್ಲಿ ಸ್ನಾನಿಕನಾದ ಯೋಹಾನನು ಪರಲೋಕ ರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಯೂದಾಯದ ಅಡವಿಯಲ್ಲಿ ಸಾರಿ ಹೇಳುತ್ತಾ ಬಂದನು.....ಆಗ ಯೆರೂಸಲೇಮೂ, ಎಲ್ಲಾ ಯೂದಾಯವೂ ಯೋರ್ದನ್ ಹೊಳೆಯ ಸುತ್ತಲಿರುವ ಎಲ್ಲಾ ಸೀಮೆಯೂ ಅವನ ಬಳಿಗೆ ಹೊರಟುಹೋಗಿ, ತಮ್ಮತಮ್ಮ ಪಾಪಗಳನ್ನು ಹೇಳಿಕೊಂಡು ಯೊರ್ದನ್ ಹೊಳೆಯಲ್ಲಿ ಅವನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿದ್ದರು’’ (ಮತ್ತಾಯ 3:1–6). ಇದರಲ್ಲಿ ವಿಶೇಷವೆಂದರೆ, ಯಾವ ಜನಾಂಗವು ಸುನ್ನತಿ ಮಾಡಿಸಿಕೊಳ್ಳುವುದೇ ಧರ್ಮದೀಕ್ಷೆ ಎಂದು ಭಾವಿಸಿದ್ದರೋ, ಅಂಥವರಿಗೇ ಕೇವಲ ಸುನ್ನತಿ ಮಾಡಿಸಿಕೊಳ್ಳುವುದಷ್ಟೇ ಸಾಲದು ಎಂದು ಹೇಳಲ್ಪಟ್ಟಿತು. ಪಾಪಕ್ಷಮೆಯನ್ನು ಹೊಂದಬೇಕಾದರೆ ಮೊದಲು ಪಾಪವನ್ನು ಒಪ್ಪಿಕೊಂಡು, ಪಶ್ಚಾತ್ತಾಪಪಟ್ಟು ದೀಕ್ಷಾಸ್ನಾನವನ್ನು ಪಡೆಯಬೇಕು ಎಂಬುದನ್ನು ಅವರು ಅರಿತುಕೊಳ್ಳಬೇಕಾಯಿತು. ಇದೇ ಸಂದೇಶವನ್ನು ಯೇಸುಕ್ರಿಸ್ತನು ತನ್ನ ದಿಕ್ಷಾಸ್ನಾನದ ನಂತರ ಬೋಧಿಸಿದನು– ‘‘***ಅಂದಿನಿಂದ ಯೇಸು–ಪರಲೋಕ ರಾಜ್ಯವು ಸಮೀಪಿಸಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಸಾರಿ ಹೇಳುವುದಕ್ಕೆ ಪ್ರಾರಂಭಿಸಿದನು***’’ (ಮತ್ತಾಯ 4:17).



### ಇನ್ನೂ ಹೆಚ್ಚಿನದು ಬೇಕಾಗಿದೆ :–

ಯೋಹಾನನು, ಯೇಸುಕ್ರಿಸ್ತನೂ ಮಾಡಿದ ಈ ಬೋಧನೆಯನ್ನು ಕುರಿತು ನಾವು ಆಲೋಚಿಸಬೇಕದ ಅಗತ್ಯವಿದೆ. ಅವರಿಬ್ಬರೂ ಯೆಹೂದ್ಯರಿಗೆ ಹೀಗೆಂದರು–‘‘ನಿಮಗೂ ನಿಮ್ಮ ನೆರೆಯ ದೇಶಗಳ ಜನರಿಗೂ ಯಾವ ವ್ಯತ್ಯಾಸವೂ ಇಲ್ಲ. ನೀವೂ ದೇವರ ಕ್ಷಮಾಪಣೆಯ ಅಗತ್ಯವಿರುವ ಪಾಪಿಗಳೇ ಎಂಬುದನ್ನು ನೀವು ಅರ್ಥಮಾಡಿಕೊಳ್ಳಬೇಕು, ನೀವು ಕ್ಷಮೆಯನ್ನು ದೀಕ್ಷಾಸ್ನಾನಕ್ಕೆ ಒಳಪಡುವುದರಿಂದ ಹೊಂದಬಹುದು’’.

ಸುವಾರ್ತೆಗಳಲ್ಲಿ ಓದುವ ಹಾಗೆ ಯೆಹೂದ್ಯರೂ ಪಾಪಿಗಳೆನಿಸಿಕೊಳ್ಳಲು ಸಾಧ್ಯ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಹಾಗೆಯೇ ಕೆಲವು ಅನ್ಯಜನರಲ್ಲಿಯೂ ದೇವರಿಗೆ

ಮೆಚ್ಚುಗೆಯಾಗುವಂಥ ಗುಣಲಕ್ಷಣಗಳನ್ನು ಕಾಣಬಹುದು. ನಮ್ಮನ್ನು ಮಂತ್ರಮುಗ್ಧಗೊಳಿಸುವ ಘಟನೆಯೊಂದನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು: ರೋಮ್ ಸಾಮ್ರಾಜ್ಯದ ದಂಡಿನ ಒಬ್ಬ ಶತಾಧಿಪತಿಗೆ ಇಷ್ಟನಾದ ಸೇವಕನೊಬ್ಬನಿದ್ದನು. ಆತನು ಪ್ರಾಣಾಂತಿಕ ಖಾಯಿಲೆಗೊಳಗಾಗಿದ್ದನು(ಲೂಕ 7:2), ಶತಾಧಿಪತಿಯು ಸ್ವತಃ ವಿಶಿಷ್ಟಸ್ವಭಾವದವನಾಗಿದ್ದು ಯೆಹೂದ್ಯರನ್ನು ಪ್ರೀತಿಸುತ್ತಿದ್ದನು. ಮತ್ತು ಅವರಿಗೋಸ್ಕರ ಒಂದು ಸಭಾಮಂದಿರವನ್ನು ಕಟ್ಟಿಸಿಕೊಟ್ಟಿದ್ದನು. ಈತನು ಯೇಸುಕ್ರಿಸ್ತನಲ್ಲಿಯೂ ಆತನ ಅಧಿಕಾರ ಮತ್ತು ದೂರದಿಂದಲೂ ತನ್ನ ಆಳನ್ನು ಗುಣಪಡಿಸಲು ಬೇಕಾದ ಶಕ್ತಿಯು ಕ್ರಿಸ್ತನಿಗೆ ಇದೆ ಎನ್ನುವುದರ ಬಗ್ಗೆಯೂ, ತನ್ನ ಸಂಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸಿದನು.

ಯೇಸುಕ್ರಿಸ್ತನು ಅವನ ನಂಬಿಕೆಯ ಬಗ್ಗೆ **ಆಶ್ಚರ್ಯಪಟ್ಟು**(ಈ ಮುಖ್ಯಪದವನ್ನು ಗಮನಿಸಬೇಕು) ಹೀಗೆಂದನು–"ನಾನು ಇಂಥ ದೊಡ್ಡ ನಂಬಿಕೆಯನ್ನು ಇಸ್ರಾಯೇಲ್ ಜನರಲ್ಲಿಯೂ ಕಾಣಲಿಲ್ಲವೆಂದು ನಿಮಗೆ ಹೇಳುತ್ತೇನೆ" (ಲೂಕ 7:9). ಆದರೆ ಶತಾಧಿಪತಿಯ ನಂಬಿಕೆಯ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸುವುದಕ್ಕಿಂತ ಹೆಚ್ಚಿನದನ್ನು ಯೇಸುಕ್ರಿಸ್ತನು ಮಾಡುತ್ತಾನೆ. ಮತ್ತಾಯನ ಸುವಾರ್ತೆಯಲ್ಲಿ ತಿಳಿಸಿರುವಂತೆ ಯೇಸುಕ್ರಿಸ್ತನು ಹೀಗೆಂದು ಉದ್ಗರಿಸಿದನು– "ಇದಲ್ಲದೆ ನಿಮಗೆ ಹೇಳುವುದೇನೆಂದರೆ ಮೂಡಣ, ಪಡುವಣ ದಿಕ್ಕುಗಳಿಂದ ಬಹಳಷ್ಟು ಜನರು ಬಂದು ಪರಲೋಕ ರಾಜ್ಯದಲ್ಲಿ ಅಬ್ರಹಾಮ, ಇಸಾಕ, ಯಾಕೋಬ ಇವರ ಸಂಗಡ ಊಟಕ್ಕೆ ಕೂಡ್ರುವರು" (ಮತ್ತಾಯ 8:11).

ಇದೀಗ ಈ ಹೇಳಿಕೆಯು ಬಹಳ ಮುಖ್ಯವಾದುದ್ದು; ಏಕಂದರೆ ಕರ್ತನಾದ ಯೇಸು ತನ್ನ ಎರಡನೆಯ ಬರುವಿಕೆಯಲ್ಲಿ ಸ್ಥಾಪಿಸಲಿರುವ ರಾಜ್ಯದಲ್ಲಿ ಸ್ಥಾನ ಲಭಿಸುವುದು ಸುನ್ನತಿ ಮಾಡಿಸಿಕೊಳ್ಳುವುದರ ಮೇಲಲ್ಲ, ಆದರೆ ನಂಬಿಕೆ ದೃಢವಾಗಿರುವುದರ ಮೇಲೆ ಅವಲಂಬಿತವಾಗಿದೆ.

## ನಂಬಿಕೆಯಿಂಬ ಕೀಲಿಕೈ :–

ನಂಬಿಕೆಯೇ ಮೂಲವಿಷಯವಾಗಿದೆ–ದೇವರಲ್ಲಿ ಮತ್ತು ಆತನ ವಾಕ್ಯದಲ್ಲಿ ನಂಬಿಕೆ, ಆ ವಾಕ್ಯವನ್ನು ಸ್ವೀಕರಸಿ ಅದಕ್ಕೆ ವಿಧೇಯವಾಗಿರುವುದರಲ್ಲಿ ನಂಬಿಕೆ. ಈ ಎಲ್ಲಾ ಬಗೆಯ ನಂಬಿಕೆಯು ಒಬ್ಬ ಮನುಷ್ಯನ ವ್ಯಕ್ತಿತ್ವದಲ್ಲಿ ಹೇಗೆ ವಿಕಾಸಗೊಳ್ಳುತ್ತವೆ ಎಂಬುದನ್ನು ತಿಳಿಯಲು ಅಬ್ರಹಾಮನ ಜೀವನದತ್ತ ನೋಟ ಹರಿಸಬೇಕು. ಹೀಗೆ ಮಾಡಲು ಆದಿಕಾಂಡದ 12ನೇ ಅಧ್ಯಾಯದ ಪ್ರಾರಂಭಕ್ಕೆ ಹೋಗಬೇಕು. ಅವನಿನ್ನೂ ಅಬ್ರಹಾಮನೆಂದು ಕರೆಯಲ್ಪಡದಿದ್ದಾಗ, ದೇವರು ಆತನು ವಾಸವಾಗಿದ್ದ ಊರ್ ಪಟ್ಟಣವನ್ನು ಬಿಟ್ಟು ನಾನು ತೋರಿಸುವ ಹೊಸದೇಶಕ್ಕೆ ಹೋಗಬೇಕೆಂದು ಕರೆದನು. ಆತನು ಮರುಮಾತನಾಡದೆ ದೇವರು ಹೇಳಿದ ಹಾಗೆಯೇ ನಡೆದನು, ತನ್ನೆಲ್ಲಾ ಹಳೆಯ ಸಂಬಂಧಗಳನ್ನು ತೊರೆದು ಹೊರಟನು. ಇದೆಲ್ಲದರ ಹಿಂದೆ ಒಂದು ಸ್ಪಷ್ಟವಾದ ದೈವೀಕ ಉದ್ದೇಶವಿತ್ತು. ಏಕಂದರೆ ದೇವರು ಹೀಗೆ ಹೇಳಿದನು– "ನಾನು ನಿನ್ನನ್ನು ಮಹಾಜನಾಂಗವಾಗುವಂತೆ ಮಾಡಿ ಆಶೀರ್ವದಿಸುವೆನು ..... ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವುದು" (ಆದಿಕಾಂಡ 12:2,3).



ತನ್ನೆಲ್ಲಾ ಹಳೇ ಸಂಬಂಧಗಳನ್ನು ಬಿಟ್ಟು ಹೊರಡಬೇಕೆಂಬ ಕರೆಯನ್ನು ಅಬ್ರಾಮನಿಗೆ ಕೊಟ್ಟಾಗ ದೇವರ ಚಿತ್ತದಲ್ಲಿನ ಮಹಾಸಂಕಲ್ಪವನ್ನು ನಾವು ಅರಿತುಕೊಳ್ಳಬೇಕಾದದ್ದು ಬಹಳ ಮುಖ್ಯ. ಆತನ ಮುಖಾಂತರ ಎಲ್ಲಾ ಜನಾಂಗಗಳನ್ನು ಆಶೀರ್ವದಿಸುವ ಉದ್ದೇಶವು ದೇವರದಾಗಿತ್ತು. ಅಬ್ರಾಮನಿಗೆ ತನ್ನ ವಯಸ್ಸಾದ ಹೆಂಡತಿ ಸಾರಯಳು ಒಬ್ಬ ಮಗನನ್ನು ಹೆರುವಳು ಎಂದು ಹೇಳಲ್ಪಟ್ಟಿತು.



ಕಾಲವು ಕಳೆಯುತ್ತಾ ಹೋದಂತೆ ಈ ವಾಗ್ದಾನವು ನೆರವೇರುವ ಸಾಧ್ಯತೆ ಕಡಿಮೆಯಾಗಿ ಕಾಣಿಸುತ್ತಿತ್ತು. ಆದರೆ ದೇವರು ಮಾತ್ರ ತನ್ನ ಸೇವಕನಾದ ಅಬ್ರಾಮನಿಗೆ ಅಭಯವನ್ನಿತ್ತು ಆಕಾಶದತ್ತ ನೋಡಲು ಹೇಳಿದನು, ಆತನು ನೋಡಿದಾಗ ದೇವರು ಹೀಗೆ ಹೇಳಿದ್ದಾನೆ–"**ನಿನ್ನ ಸಂತಾನವು ಆಕಾಶದ ನಕ್ಷತ್ರಗಳಷ್ಟಾಗುವುದು**" (ಆದಿಕಾಂಡ 15:15). ಇಂತಹ ಸುಧಾರಣೆಯು ತೀರ ಅಸಂಭವನೀಯ ಎಂದು ತೋರಿದರೂ ಅಬ್ರಾಮನು ಅದನ್ನು ಒಪ್ಪಿ ಸ್ವೀಕರಿಸಿದನು. ಇದು ಬಹಳ ಮುಖ್ಯವಾದುದೆಂದು ದೇವರ ಲೆಕ್ಕದಲ್ಲಿ ಎಣಿಸಲ್ಪಟ್ಟಿದೆ. ಆದುದರಿಂದ ಹೀಗೆ ಬರೆಸಲ್ಪಟ್ಟಿದೆ–

"ಅಬ್ರಾಮನು ಯೆಹೋವನನ್ನು ನಂಬಿದನು; ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು" (ಆದಿಕಾಂಡ 15:6).

ಹೇಗೆ ಅಬ್ರಾಮನು ದೇವರವಾಕ್ಯಕ್ಕೆ ವಿಧೇಯನಾಗಿ ತನ್ನೆಲ್ಲಾ ಹಳೆಯ ಸಂಬಂಧಗಳನ್ನು ತೊರೆದನೋ ಹಾಗೆಯೇ ಅವನ ನಂಬಿಕೆಯೂ ವಿಚಲಿತವಾಗದೆ ದೃಢವಾಗಿತ್ತು. ಹೀಗೆ ನಾವು ನೋಡುವುದೇನೆಂದರೆ ಹಳೆಯ ಒಡಂಬಡಿಕೆಯ ಆರಂಭದಲ್ಲಿಯೇ, ದೇವರ ವಾಕ್ಯದ ಮೇಲಿನ ನಂಬಿಕೆಯು ನೀತಿಯೊಂದಿಗೆ ಸಮ್ಮಿಳಿತವಾಗಿರುತ್ತದೆ ಎಂಬ ಹೊಸ ಒಡಂಬಡಿಕೆಯ ಮಹಾನ್ ಬೋಧನೆಯು ವ್ಯಕ್ತವಾಗಿದೆ. ಈ ವಿಷಯವನ್ನೇ ಪೌಲನು ರೊಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ವಿಸ್ತ್ರುತಪಡಿಸಿದ್ದಾನೆ.

## ಹೊಸಒಡಂಬಡಿಯ ಸತ್ಯ :–

ಹೊಸಒಡಂಬಡಿಕೆಯ ಮೊದಲನೆಯ ಸುವಾರ್ತಾ ಪುಸ್ತಕವು ಹೀಗೆ

ಆರಂಭಗೊಳ್ಳುತ್ತದೆ– **"ಯೇಸುಕ್ರಿಸ್ತನ ವಂಶಾವಳಿಯು. ಆತನು ದಾವೀದನ ವಂಶದವನು ದಾವೀದನು ಅಬ್ರಹಾಮನ ವಂಶದವನು"** (ಮತ್ತಾಯ 1:1). ಇದು ಹಳೆಯ ಒಡಂಬಡಿಕೆಯೊಂದಿಗೆ ಇರುವ ಜೀವಂತ ಸಂಬಂಧವನ್ನು ಸೂಚಿಸುವುದರೊಂದಿಗೆ, ಹೊಸ ಒಡಂಬಡಿಕೆಯಲ್ಲಿ ವ್ಯಕ್ತವಾಗಿರುವ ದೇವರ ಉದ್ದೇಶವನ್ನು ಅರ್ಥಮಾಡಿಕೊಳ್ಳಲು ಒಂದು ಅಮೂಲ್ಯ ಸುಳಿವೂ ಆಗಿದೆ.

ಇಸ್ರಾಯೇಲ್ಯರು ಅಥವಾ ಇಂದು ಯೆಹೂದ್ಯರು ಎಂದು ಕರೆಯಲ್ಪಡುವ ಜನಾಂಗವು ಅಬ್ರಹಾಮನ ಶಾರೀರಿಕ ಸಂತಾನ, ಹಾಗೆಯೇ ಯೆಹೂದ್ಯರಲ್ಲದ ನಾವೆಲ್ಲಾ ಆತನ ಆತ್ಮೀಕ ಸಂತಾನ ಎಂಬುದರ ಬಗ್ಗೆ ಯಾವ ಸಂಶಯವೂ ಇಲ್ಲ. ನಾವು ದೇವರ ಮೇಲಿನ ಅತನ ದೃಢವಿಶ್ವಾಸದಲ್ಲಿ ಪಾಲುದಾರರು ಮಾತ್ರವಲ್ಲ ಆತನ ವಿಧೇಯತೆಯ ಉದಾಹರಣೆಯನ್ನೂ ಅನುಸರಿಸುವವರಾಗಿದ್ದೇವೆ. ಈ ಸಂಗತಿಯು ಯೇಸುಕ್ರಿಸ್ತನು ಕೆಲವು ಯೆಹೂದ್ಯರೊಡನೆ ನಡೆಸಿದ ಸಂಭಾಷಣೆಯೊಂದರಲ್ಲಿ ವ್ಯಕ್ತಪಡುತ್ತದೆ. ಆ ಜನರಿಗೆ(ಯೆಹೂದ್ಯರಿಗೆ) ಅಬ್ರಹಾಮನ ವಂಶಜರೆಂಬುದು ಬಹಳ ಗರ್ವದ ಮಾತಾಗಿತ್ತು– "ನಮ್ಮ ತಂದೆಯು ಅಬ್ರಹಾಮನೇ" (ಯೋಹಾನ 8:39). ಇದಕ್ಕೆ ಯೇಸುಕ್ರಿಸ್ತನು ಕಠಿಣವಾಗಿ ಉತ್ತರಿಸುತ್ತಾನೆ– "ನೀವು ಅಬ್ರಹಾಮನ ಮಕ್ಕಳಾಗಿದ್ದರೆ ಅಬ್ರಹಾಮನು ಮಾಡಿದಂಥ ಕೃತ್ಯಗಳನ್ನು ಮಾಡುತ್ತಿದ್ದಿರಿ". ಯೇಸುಕ್ರಿಸ್ತನು ಈ ಜನರು ತನ್ನನ್ನು ಕೊಲ್ಲುವ ಉದ್ದೇಶದಿಂದ ಕೂಡಿದ್ದಾರೆಂದು ಹೇಳುತ್ತಾನೆ. ಇಂತಹ ವಿಚಾರವನ್ನು ಅಬ್ರಹಾಮ ಎಂದಿಗೂ ಯೋಚಿಸಿರಲಾರ. ಇದೇನು ಪೊಳ್ಳು ಆಪಾದನೆಯಾಗಿರಲಿಲ್ಲ. ಏಕೆಂದರೆ ಕಡೆಯಲ್ಲಿ ಯೆಹೂದ್ಯರು ಯೇಸುವಿನ ಶಿಲುಬೆಯ ಮರಣಕ್ಕೆ ಕಾರಣಕರ್ತರಾದರು.

## ಲೋಕ ರಕ್ಷಕ :–

ಯೇಸುವಿನ ಅನೇಕ ಹೇಳಿಕೆಗಳು ಅವನೇ ಲೋಕರಕ್ಷಕನಾಗಿದ್ದಾನೆಂಬುದನ್ನು ತೋರಿಸುತ್ತವೆ, ಮತ್ತು ದೇವರ ಉದ್ದೇಶವು ಯೆಹೂದ್ಯರನ್ನು ಮಾತ್ರವಲ್ಲ, ಲೋಕದ ಎಲ್ಲಾ ಜನಾಂಗಗಳನ್ನೂ ರಕ್ಷಿಸುವುದಾಗಿತ್ತು. ತನ್ನನ್ನು ಒಳ್ಳೇ ಕುರುಬ ಎಂದು ಕರೆದುಕೊಳ್ಳುವ ಅಧ್ಯಾಯದಲ್ಲಿ ಯೇಸುಕ್ರಿಸ್ತನು ತನ್ನ ಹಿಂಬಾಲಕರಲ್ಲಿ ಯೆಹೂದ್ಯರೂಂದಿಗೆ ಅನ್ಯರೂ ಇರುತ್ತಾರೆಂದು ಸೂಚಿಸುತ್ತಾನೆ– **"ಇದಲ್ಲದೆ ಈ ಹಟ್ಟಿಗೆ ಸೇರದಿರುವ ಇನ್ನೂ ಬೇರೆ ಕುರಿಗಳು ನನಗೆ ಅವೆ. ಅವುಗಳನ್ನು ನಾನು ತರಬೇಕು, ಅವು ನನ್ನ ಸ್ವರಕ್ಕೆ ಕಿವಿಗೊಡುವುವು; ಆಗ ಒಂದೇ ಹಿಂಡು ಆಗುವುದು, ಒಬ್ಬನೇ ಕುರುಬನಿರುವನು"** (ಯೋಹಾನ 10:16).

ನಮ್ಮ ಮುಂದಿನ ಅಧ್ಯಯನದಲ್ಲಿ ಕರ್ತನು ರಾಷ್ಟ್ರೀಯ ಸೀಮೆಗಳಿಲ್ಲದ ನಿಜವಾಗಿಯೂ ಅಂತರಾಷ್ಟ್ರೀಯ ಹಂತದ ಹೊಸ ಸಮಾಜ ನಿರ್ಮಾಣದಲ್ಲಿ ತಾನು ತೊಡಗಿರುವುದನ್ನು ಚೆನ್ನಾಗಿ ಅರಿತಿದ್ದನು ಎಂಬುದರ ಬಗ್ಗೆ ಮತ್ತಷ್ಟು ಪ್ರಮಾಣಗಳನ್ನು ದೇವರ ಚಿತ್ತವಾದರೆ ಒದಗಿಸುವ ನಿರೀಕ್ಷೆ ಹೊಂದಿದ್ದೇವೆ.

• • • • • • • • • • • •





# ಕುಗ್ಗಿಹೋಗಿರುವೆಯಾ?

## (ಧ್ಯಾನ)

ದಾವಿದನು ಕೇಳುತ್ತಾನೆ, ‘‘**ನನ್ನ ಮನವೇ, ನೀನು ಕುಗ್ಗಿಹೋಗಿರುವದೇನು?**’’. ಆತನೂ ಸಹ ನಮ್ಮ ಹಾಗೆಯೇ. ಆತನು ತನ್ನ ಎಲ್ಲಾ ಸಾಮರ್ಥ್ಯದಿಂದ ಕರ್ತನ ಮುಂದೆ ಕುಣಿಯುವಾಗ, ತನ್ನ ಹರ್ಷ ಮತ್ತು ಉತ್ಸಾಹದ ಕ್ಷಣಗಳನ್ನು ಕಂಡನು. ಆದರೆ ತಾನು ಎದೆಗುಂದಿದ ಕ್ಷಣಗಳೂ ಆತನ ಜೀವನದಲ್ಲಿ ಇತ್ತು, ತಾನು ಏನು ಮಾಡಬೇಕೆಂದು ಗೊತ್ತಿರಲಿಲ್ಲ.

ದೇವರ ನಂಬಿಗಸ್ತ ಮನುಷ್ಯರಾದ ದಾವೀದ ಮತ್ತು ಇತರರು ತಮ್ಮ ಮನೋವ್ಯಥೆಯ ಸಮಯಗಳಲ್ಲಿ ಹೇಗೆ ಪ್ರತಿಕ್ರಿಯಿಸಿದರೆಂಬುದನ್ನು ನಾವು ನೋಡುವುದಾದರೆ, ನಾನು ನಮ್ಮ ಕುಗ್ಗಿದ ಸಮಯಗಳನ್ನು ಹೇಗೆ ಸಹಿಸಬಹುದೆಂದು ಕಲಿಯಬಹುದು. ದಾವೀದನು ತಾನು ಕುಗ್ಗಿಹೋಗಿರುವಾಗ, ತನ್ನ ಯೋಚನೆಗಳನ್ನೆಲ್ಲಾ ದೇವರ ಕಡೆಗೆ ತಿರುಗಿಸಿದನು. ಆತನು ನಮ್ಮ ಹಾಗೆಯೇ ಕೂತುಕೊಂಡು ತನಗಿರುವ ಆಶೀರ್ವಾದಗಳನ್ನು ಎಣಿಸಿ, ತಾನು ಕುಗ್ಗಿಹೋಗುವುದು ಬೇಡವೆಂದು ಗ್ರಹಿಸಿಕೊಂಡಿರಬಹುದಿತ್ತು.



ಆದರೆ, ಆದಾಗ್ಯೂ ಆತನು ತನಗೆ ತಾನೇ ಈ ಪ್ರಶ್ನೆಯನ್ನು ಕೇಳಿಕೊಳ್ಳುತ್ತಾನೆ, ‘‘**ನಾನು ಇಷ್ಟು ಕುಗ್ಗಿಹೋಗಿರುವುದೇಕೆ? ನಾನು ಮತ್ತೆ ಎದ್ದು ನಿಲ್ಲಲು ಏನು ಮಾಡಬಹುದು?**’’.

ದಾವೀದನು ತನ್ನ ಮನದ ಭಾವನೆಗಳನ್ನು ಸರಿಯಾಗಿ ಎಣಿಸಿದ್ದನ್ನು ನಾವು ಗ್ರಹಿಸುವುದು ಒಳ್ಳೇದು. ಆತನು ಕುಗ್ಗಿ ಹೋಗಿದ್ದನು, ಆತನು ಇದನ್ನು ನಿರ್ಬಂಧವಿಲ್ಲದೆ ತನ್ನಲ್ಲಿ ಮತ್ತು ದೇವರಲ್ಲಿ ಒಪ್ಪಿಕೊಂಡು ಹೇಳುತ್ತಾನೆ–

‘‘**ಓ ನನ್ನ ದೇವರೆ, ನನ್ನ ಮನವು ನನ್ನೊಳಗೆ ಕುಗ್ಗಿಹೋಗಿದೆ**’’.

ಯಾವುದೇ ರೋಗವನ್ನು ಶಮನ ಮಾಡಿಕೊಳ್ಳುವ ಮೊದಲ ಹೆಜ್ಜೆಯೆಂದರೆ, ಅದು ಇದೆ ಎಂಬುದನ್ನು ಗ್ರಹಿಸಿಕೊಳ್ಳಬೇಕು ಮತ್ತು ಅದನ್ನು ಪ್ರಾಮಾಣಿಕವಾಗಿ ಎದುರಿಸಬೇಕು. ತಾನು ನಿಶ್ಚಯವಾಗಿ ಕುಡುಕನೇ ಎಂಬುದನ್ನು ಒಪ್ಪಿಕೊಳ್ಳುವವರೆಗೂ, ಯಾವ ಕುಡುಕನೂ ಸಹಾಯವನ್ನು ಹೊಂದಲಾರನು ಎಂದು ಹೇಳುವುದುಂಟು. ಒಳ್ಳೆಯದು, ದಾವೀದನು ತಾನು



ಕುಗ್ಗಿ ಹೋಗಿದ್ದೇನೆಂಬುದನ್ನು ಒಪ್ಪಿಕೊಂಡನು, ಆದರೆ ಅದಲ್ಲಿಯೇ ಇದ್ದರೆ ಅದಕ್ಕೆ ಶಮನವಿಲ್ಲವೆಂದು ತಿಳಿದು ಅದಲ್ಲಿಯೇ ನಿಲ್ಲಲಿಲ್ಲ.

ದಾವೀದನು ಸಹಾಯಕ್ಕಾಗಿ ದೇವರ ಕಡೆಗೆ ತಿರುಗಿಕೊಂಡನು. ನಮ್ಮ ಲಾಭಕ್ಕಾಗಿ ಆತನು ತನ್ನ ಯೋಚನೆಗಳನ್ನು ಬರೆದಿಡುತ್ತಾನೆ. ಆತನು ತನಗೆ ಹೇಳಿಕೊಂಡನು–

‘‘**ದೇವರನ್ನು ನಿರೀಕ್ಷಿಸು; ನನ್ನ ಮುಖದ ಲಕ್ಷಣವೂ ನನ್ನ ದೇವರೂ ಆಗಿರುವಾತನನ್ನು ಇನ್ನೂ ಕೊಂಡಾಡುವೆನು**’’.

ಈ ನಿರ್ದಿಷ್ಟ ಸಂದರ್ಭದಲ್ಲಿ ದಾವೀದನು ಅಸ್ವಸ್ಥನಾಗಿ ಹಾಸಿಗೆಯಲ್ಲಿದ್ದನೆಂಬುದು ಕುತೂಹಲಕರವಾದದ್ದು(ಕೀರ್ತನೆಗಳು 41, 42 ಮತ್ತು 43ನೇ ಅಧ್ಯಾಯಗಳು). ನಾವು ಅಸ್ವಸ್ಥರಾಗಿದ್ದಾಗ ಎದಿಗುಂದಿದವರಾಗುವುದು ನಿಶ್ಚಯವಾಗಿ ಸುಲಭವೇ, ಆದರೆ ಚಿಂತೆಗಳು ಯಾವ ಕ್ಷಣದಲ್ಲಿಯೂ ಬಂದು ಬಡಿಯಬಹುದು ಮತು ದೈಹಿಕವಾಗಿ ಆರೋಗ್ಯದಿಂದಿರುವವರೂ ಸಹ ಅವುಗಳನ್ನು ಸಹಿಸಿ ನಿಲ್ಲುವುದನ್ನು ಕಲಿಯಬೇಕು.

ಎದಿಗುಂದಿದಾಗ ಮಾಡಬೇಕಾದ ಕಾರ್ಯವೆಂದರೆ, ದೇವರ ಕಡೆಗೆ ತಿರುಗಿಕೊಳ್ಳುವುದೇ ಆಗಿದೆ. ***ಸತ್ಯವೇದವನ್ನು ಓದು, ಉತ್ಸಾಹದಿಂದ ಪ್ರಾರ್ಥಿಸು.*** ಇದು ವಿಷಯಗಳನ್ನೇ ಬದಲಾಯಿಸುತ್ತದೆ. ಇದು ದಾವೀದನಿಗೂ ಮಾಡಿದೆ, ಇದು ಯಾಕೋಬನಿಗೂ ಮಾಡಿದೆ. ಎಸೆಯಲ್ಪಟ್ಟದ್ದರಲ್ಲಿ ಕೆಳಗಿನವರಾಗಿ ಹೇಳುವುದಾದರೆ, ಯಾರು ಬೇಕಾದರೂ ಯೋನನಿಗಿಂತ ಕೆಳಗಿನವರೆಂದು ಪ್ರಯಾಸಪಟ್ಟು ಊಹಿಸಿಕೊಳ್ಳಬಹುದು.



ಯೋನನು ತಾನು ತಿಮಿಂಗಿಲದ ಹೊಟ್ಟೆಯೊಳಗಿದ್ದಾಗ ಏನು ಮಾಡಿದನೆಂದು ನೋಡು. ಆತನು ದೇವರಲ್ಲಿ ಪ್ರಾರ್ಥಿಸಿದನು, ಆದರೆ ಆತನ ಪ್ರಾರ್ಥನೆಯನ್ನು ಗಮನಿಸು. ಯೋನನು ಅನೇಕ ಕೀರ್ತನೆಗಳನ್ನೂ, ಪ್ರಸಂಗಿಯ ಮಾತುಗಳನ್ನು ಎತ್ತಿ ಹೇಳಿದ್ದಾನೆ. ಈಗ ಈ ವಿಷಯವು ನಮಗೆ ಏನು ತಿಳಿಸುತ್ತದೆ? ಇದು ನಮಗೆ ತಿಳಿಸುತ್ತಿರುವುದೇನೆಂದರೆ, ಯೋನನು ತನ್ನ ಸತ್ಯವೇದವನ್ನು ಓದಿದ್ದನು ಮಾತ್ರವಲ್ಲ, ಅದರ ಹೆಚ್ಚಿನದನ್ನು ಜ್ಞಾಪಕದಲ್ಲಿಟ್ಟುಕೊಂಡಿದ್ದನು ಮತ್ತು ಅವುಗಳನ್ನು ತನ್ನ ಮನಸ್ಸಿಗೆ ತಂದುಕೊಳ್ಳುವವನಾಗಿದ್ದನು. ತಾನು ತಿಮಿಂಗಿಲದಿಂದ ನುಂಗಲ್ಪಟ್ಟಾಗ, ನಿಶ್ಚಯವಾಗಿ ಅವನ ಕೈಯಲ್ಲಿ ಯಾವ ಸತ್ಯವೇದವೂ ಇರಲಿಲ್ಲ, ಒಂದು ವೇಳೆ ಇತ್ತು ಎನ್ನುವುದಾದರೂ, ತಿಮಿಂಗಿಲದ ಹೊಟ್ಟೆಯೊಳಗೆ ಅದನ್ನು ಓದಲು ಅದು ಬಹಳ ಕತ್ತಲು.

ನಾವು ಯಾವಾಗಲೂ ನಮ್ಮ ಕೈಯಲ್ಲಿ ಸತ್ಯವೇದವನ್ನು ಇಟ್ಟುಕೊಳ್ಳಲು ಸಾಧ್ಯವಿಲ್ಲವಾದರೂ, ಅದರ ಸುಂದರವಾದ ಸಂದೇಶಗಳನ್ನು ನಮ್ಮ ಮನದಲ್ಲಿ

ಬರೆದುಕೊಂಡಿರುವುದಾದರೆ, ಇಕ್ಕಟ್ಟಿನ ಸಮಯಗಳಲ್ಲಿ ಆ ಸಂದೇಶಗಳನ್ನು ನಮ್ಮ ಸಹಾಯಕ್ಕಾಗಿ ಕರೆಯಬಹುದಾಗಿದೆ.

ಯೇಸುವು ಅಡವಿಗೆ ಹೋಗುವಾಗ, ತನ್ನ ಸತ್ಯವೇದದ ಸುರುಳಿಗಳನ್ನು ಇಟ್ಟುಕೊಂಡಿದ್ದನೋ ನಮಗೆ ಗೊತ್ತಿಲ್ಲವಾದರೂ, ನಿಶ್ಚಯವಾಗಿ, ತಾನು ಸಹಿಸಿದ ಶೋಧನೆಗಳನ್ನು ತನ್ನ ಮನದಿಂದ ನೇರವಾಗಿಯೇ ಎದುರಿಸಿದ್ದನು. "**ನಿನ್ನ ಕರ್ತನಾದ ದೇವರನ್ನು ಪರೀಕ್ಷಿಸಬಾರದು**" ಎಂಬುದನ್ನು ಅಲ್ಲಿ ನಿಂತು, ಧರ್ಮೋಪದೇಶಕಾಂಡ 6:16ರ ಸುರುಳಿಯನ್ನು ಬಿಚ್ಚಿ ನೋಡಿ ಹೇಳಿರಲಿಲ್ಲ.

ಮರಿಯಳು ಯಾಕೆ ಕರ್ತನಾದ ಯೇಸುಕ್ರಿಸ್ತನ ತಾಯಿಯಾಗಿ ಆರಿಸಲ್ಪಟ್ಟಳು ಎಂಬುದನ್ನು ನಾವು ನೋಡಬಹುದು. ನಾವು ಗಮನಿಸಿ ನೋಡುವಾಗ, ತಾನು ಎಲಿಸಬೇತಳ ಮನೆಯನ್ನು ಪ್ರವೇಶಿಸುವಾಗ ಮರಿಯಳು ಒಂದು ಸಣ್ಣ ಮಾತಿನಲ್ಲಿ, ಐದು ಬೇರೆಬೇರೆ ಕೀರ್ತನೆಗಳು, ಮಲಾಕಿ, ಯೆಹೆಜ್ಕೇಲ ಮತ್ತು ಒಂದನೇ ಸಮುವೇಲ, ಈ ಐದು ಪುಸ್ತಕಗಳ ವಾಕ್ಯಗಳನ್ನು ಹೇಳಿದಳು. ಆಕೆಯು ಈ ವಾಕ್ಯ ಸಂದೇಶಗಳನ್ನು ಧ್ಯಾನಿಸಿದ್ದರಿಂದಲೇ ಹೀಗೆ ಹೇಳಲಾಯಿತು ಮತ್ತು ಬೇಕಾದಾಗ ಅವುಗಳನ್ನು ತನ್ನ ಮನಸ್ಸಿನಲ್ಲಿ ತಂದುಕೊಳ್ಳುವವಳಾಗಿದ್ದಳು.



ನಮ್ಮನ್ನು ಆದರಿಸುವ ಸತ್ಯವೇದದ ವಾಕ್ಯಗಳನ್ನು ನಾವು ನಮ್ಮ ಹೃದಯಗಳಲ್ಲಿ ಬಚ್ಚಿಟ್ಟುಕೊಂಡಿರುವಾದರೆ, ನಾವು ಇಕ್ಕಟ್ಟಿನಲ್ಲಿ ಸಿಲುಕಿದಾಗ ಅಥವಾ ಕುಗ್ಗಿ ಹೋಗುವಾಗ, ನಾವೂ ಸಹ ಅವುಗಳನ್ನು ಜ್ಞಾಪಿಸಿಕೊಳ್ಳಬಹುದಾಗಿದೆ ಮತ್ತು ಅವು ನಮ್ಮನ್ನು ಮೇಲಕ್ಕೆತ್ತುತ್ತವೆ. ಇದು ಹೊಸ ಆಲೋಚನೆ ಏನಲ್ಲ, ಆದರೆ ಇದನ್ನು ನಾವು ಅಭ್ಯಾಸಿಸದೆ ಬಿಟ್ಟಿರುವಂತದ್ದಾಗಿದೆ. ಎಲ್ಲಾ ಒಳ್ಳೇ ಉಪಾಯಗಳ ಹಾಗೆ ಇದು ಸಹ ಕೈಗೊಂಡು ನಡೆಯುವುದರಿಂದಲೇ ಆಗುವಂತದ್ದಾಗಿದೆ. ನಾವು ಪ್ರತಿದಿನ ನಮ್ಮ ಮನಸ್ಸನ್ನು ದೇವರ ಆಲೋಚನೆಗಳಿಂದ ತುಂಬಿಸಿಕೊಳ್ಳೋಣ, ಎಚ್ಚರಿಕೆಯ ಸಮಯಗಳಲ್ಲಿ ಅವುಗಳನ್ನು ಆತುಕೊಳ್ಳಬಹುದಾಗಿದೆ. ಇನ್ನೊಮ್ಮೆ ನಮ್ಮ ಮನಸ್ಸು ಚಿಂತೆ ಮತ್ತು ಉದ್ವೇಗಗಳಿಂದ ಕುಲುಕಾಡಿದಾಗ, ***ಯೆಶಾಯ 26:3-4*** ವಾಕ್ಯಗಳನ್ನು ಜ್ಞಾಪಕಮಾಡಿಕೋ, ನಮಗೆ ಅದು ಏನನ್ನು ಹೇಳುವುದೆಂದು ತಿಳಿದಿಲ್ಲವಾದರೆ, ಹುಡುಕು, ಅದರ ಅರ್ಥವು ನಮನ್ನು ಸಂತೈಸುವ ಮಾತುಗಳು ನಮ್ಮ ಜೀವನಗಳನ್ನು ಬದಲಾಯಿಸಲು ಶಕ್ತವಾಗಿವೆ.

•••••••••••••



**ನನ್ನ ಜೀವನವನ್ನು ಬದಲಾಯಿಸಿದ ದಿನಗಳು**

# ಇಸಾಕ-ಅಬ್ರಹಾಮನ ಮಗ

ನನ್ನ ತಂದೆಯು ಅಂದು ನಸುಕಿನಲ್ಲಿಯೇ ನನ್ನನ್ನು ಎಬ್ಬಿಸಿದಾಗ, ವ್ಯಸ್ತರಾದಂತೆ ಕಂಡರು. ಅವರು ಎಲ್ಲಿಗೋ ಹೊರಡಲು ಸಂಘಟಿತರಾಗಲು ಅವಸರಿಸುತ್ತಿದ್ದರು. ಆ ಸಮಯದಲ್ಲಿ ಹದಿವಯಸ್ಕನಾದ ನನಗೆ ಅವಸರವಾಗಿ ಏಳಲು ಸೂರ್ಯೋದಯದ ಸಮಯ ಬಳಗ ಬೇಗ ಆಯಿತು ಎನಿಸಿತು. "**ನಾವೊಂದು ಬೆಟ್ಟಕ್ಕೆ**" ಹೋಗುತ್ತಿದ್ದೇವೆ, ತಂದೆ ಹೇಳಿದರು–"ಮೂರು ದಿನದ ಪ್ರಯಾಣ, ಸಾಕಷ್ಟು ಆಹಾರ ಮತ್ತು ನೀರಿನ ಜೊತೆ ಸಾಗಾಣಿಕೆಗೆ ಪ್ರಾಣಿಗಳನ್ನು ಸಿದ್ಧಗೊಳಿಸಲು ಸೇವಕರೂ ಬೇಕು".

ನಾವು ಬೀಳ್ಕೊಂಡಾಗ ನನ್ನ ತಾಯಿ ಮೌನವಾಗಿದ್ದಳು. ನನ್ನ ತಂದೆ ತಾಯಿಯರು ಬಹಳ ವಯಸ್ಸಾದವರಾದರೂ, ನಗು ಮತ್ತು ಸಂತೋಷ ತುಂಬಿದವರಾಗಿದ್ದರು. ನನ್ನ ಜನನವು ಅವರಿಗೆ ವಿಶೇಷ ಸಂತೋಷವನ್ನು ಕೊಟ್ಟಿದೆ ಎಂಬುದು ನನಗೆ ಮೊದಲಿಂದ ಗೊತ್ತಿತ್ತು. ನಾನು ದೇವರ ವಾಗ್ದತ್ತ ಮಗುವಾಗಿದ್ದೆ. ನನ್ನ ತಾಯಿ ನನ್ನನ್ನು ಕಳುಹಿಸಲು ಮನಸ್ಸಿಲ್ಲದವರಂತೆ, ನನ್ನನ್ನು ಗಟ್ಟಿಯಾಗಿ ಅಪ್ಪಿಕೊಂಡರು. ಆದರೂ ನಾವು ಹೊರಟಾಗ ಗುಡಾರದ ದ್ವಾರದಲ್ಲಿ ನಿಂತು ಮುಗುಳ್ನಗೆಯಿಂದ ಬೀಳ್ಕೊಂಡರು.

## ಪ್ರಯಾಣದ ಕೊನೆ :-

ಪ್ರಯಾಣದ ಮೊದಲ ಎರಡು ದಿನಗಳು ಸುಖಕರವಾಗಿದ್ದವು. ನಾವು ಮರುಭೂಮಿಯನ್ನು ಬಿಟ್ಟು ಹಚ್ಚಹಸಿರಾದ, ನೀರಿನ ಝರಿಗಳು ಮತ್ತು ಹುಲ್ಲುಗಾವಲುಗಳಿದ್ದ ಬಯಲು ಪ್ರದೇಶದಲ್ಲಿ ಪ್ರಯಾಣಿಸಿದೆವು. ಆದರೆ ಮೂರನೆಯ ದಿವಸ ಬಂಜರಾದ ಪ್ರದೇಶವನ್ನು ಸೇರಿ "**ಮೊರೀಯ**" ಬೆಟ್ಟವನ್ನು ಹತ್ತಿದೆವು. ಚಟುವಟಿಕೆಯಿಂದ ಇದ್ದವರಾದರೂ, ನೂರು ವರ್ಷ ಪ್ರಾಯವನ್ನು ದಾಟಿದವರಾದ್ದರಿಂದ, ನನ್ನ ತಂದೆಗೆ ಬೆಟ್ಟ ಹತ್ತುವುದು ಕಷ್ಟವಾಗಿತ್ತು. ನಿಂತು, ನಿಂತು ನಡೆಯುವುದರ ಜೊತೆಗೆ, ಹೆಚ್ಚು ವ್ಯಸನರಾದಂತೆ ಕಂಡುಬಂದರು. ನಾವಿಬ್ಬರೂ ಮಾತ್ರ



ಮುಂದುವರೆಯುದೆಂದು ತಂದೆಯವರು ಹೇಳಿದ್ದರಿಂದ, ಸೇವಕರು ಬೆಟ್ಟದ ಬುಡದಲ್ಲಿಯೇ ಉಳಿದುಬಿಟ್ಟಿದ್ದರು.

ಒಟ್ಟಿನಲ್ಲಿ ನಾವಿಬ್ಬರೇ ಬೆಟ್ಟದ ಮೇಲೆ ಪ್ರಾರ್ಥಿಸಲು ಹೋಗಲು ತಂದೆಯವರು ಬಯಸಿದ್ದರು. ಅವರು ತಂದಿದ್ದ ಸೌದೆಯನ್ನೂ, ಬೆಂಕಿಯಿದ್ದ ಪಾತ್ರೆಯನ್ನೂ ಮೊದಲಿಗೆ ಗಮನಿಸಿದಾಗ, ಅವು ದಾರಿಯಲ್ಲಿ ಅಡುಗೆ ಮಾಡಲು ತಂದವುಗಳಾಗಿರಬಹುದೆಂದು ಭಾವಿಸಿದ್ದೆ. ಆವು ಯಜ್ಞಕ್ಕೆ ಸಂಬಂಧಪಟ್ಟ ವಸ್ತುಗಳೆಂದು ನಂತರ ವ್ಯಕ್ತವಾಗಿತ್ತು. ನನ್ನ ತಂದೆ ದೇವರಿಗೆ ಅರ್ಪಿಸುತ್ತಿದ್ದ ಯಜ್ಞಗಳನ್ನು ನೋಡುತ್ತಲೇ ನಾನು ದೊಡ್ಡವನಾಗಿದ್ದೆ. ತಮ್ಮ ಜೀವಮಾನ ಪೂರ್ತಿ ಪರಲೋಕ ದೇವರ ಬಗ್ಗೆ ನನ್ನ ತಂದೆ ತಾಯಿಗಳು ವಿಶ್ವಾಸವಿಟ್ಟಿದ್ದರು. ಮಾತ್ರವಲ್ಲ ನನಗೂ ಕೂಡ ಆ ದೇವರು ಮಾಡಿದ್ದ ವಾಗ್ದಾನಗಳ ಬಗ್ಗೆ ಕಲಿಸಿದ್ದರು. ದೇವರು ನನ್ನ ತಂದೆಯ ನಂಬಿಕೆಯನ್ನೂ, ನಂಬಿಕಸ್ತಿಕೆಯನ್ನೂ ಮೆಚ್ಚಿ ಅವರನ್ನು ಸ್ನೇಹಿತನಂತೆ ಕಾಣುತ್ತಿದ್ದನು.

## “ಯಜ್ಞದ ಕುರಿಯೆಲ್ಲಿ?”

ಈ ಪ್ರಶ್ನೆಯನ್ನು ನಾನು ಯಾವಾಗ ಕೇಳಿದೆನೆಂದು ನೆನಪಿಲ್ಲ. ಯಜ್ಞಗಳು ಎಲ್ಲಿರಬಹುದೆಂದು ನನಗೆ ಊಹಿಸಲಾಗಲಿಲ್ಲ. ಆದರೆ ದೇವರು ಅದನ್ನು ಒದಗಿಸುವನು ಎಂದು ನನ್ನ ತಂದೆ ಉತ್ತರಿಸಿದರು. ನನ್ನ ತಂದೆಗೆ ದೇವರಲ್ಲಿ ಅಷ್ಟರಮಟ್ಟಿಗೆ ವಿಶ್ವಾಸವಿತ್ತು. ಆದುದರಿಂದ ಆ ಕಡಿದಾದ ಬೆಟ್ಟವನ್ನು ಹತ್ತುವುದನ್ನು ನಾವು ಮುಂದುವರೆಸಿದೆವು. ತುದಿಯನ್ನು ತಲುಪಿದ ಮೆಲೆ ತಂದೆಯೂ, ನಾನು ಯಜ್ಞವೇದಿಯನ್ನು ಕಟ್ಟಿ(ಬಹಳ ನಿಧಾನವಾಗಿ ಎಂದು ನನಗೆ ಅನಿಸಿತು) ಅದರ ಮೆಲೆ ಕಟ್ಟಿಗೆಯನ್ನು ಜೋಡಿಸಿದೆವು. ಆಗಲೂ ಯಜ್ಞದ ಕುರಿಯ ಸುಳಿವಿರಲಿಲ್ಲ. ನಂತರ ಇದ್ದಕ್ಕಿದ್ದಂತೆ ತಂದೆ ಕುಳಿತುಕೊಂಡು ವಿವರಿಸಿದರು–ದೇವರು ಅವರನ್ನು ನನ್ನನ್ನೇ ಯಜ್ಞವಾಗಿ ಅರ್ಪಿಸುವಂತೆ ಕೇಳಿದ್ದನು! ತಂದೆಯ ವಿಧೇಯತೆಯ ಪರೀಕ್ಷೆಯಾಗಿತ್ತದು, ನನ್ನದೂ ಸಹ ಆಗಿದ್ದಿರಬಹುದು.

ಹಿಂದೆಂದೂ ಮನುಷ್ಯರಿಬ್ಬರು ಇಷ್ಟು ಇಬ್ಬಂದಿಯಲ್ಲಿದ್ದರಲಾರರು. ಧೀರ್ಘಕಾಲ ನನ್ನ ಹುಟ್ಟಿಗೆ ಪ್ರತೀಕ್ಷೆಮಾಡಿ ನಂತರ ನನ್ನನ್ನು ಅಷ್ಟು ಪ್ರೀತಿಸಿದ ತಂದೆಗೆ ಈಗ ಕೊಲ್ಲಬೇಕಾದ ಪರಿಸ್ಥಿತಿಯಾಗಿದ್ದರೆ, ಅವರಿಚ್ಛೆಯಂತೆ ಬಲಿಯಾಗಲು ನಾನು ಮಾಡಬೇಕಾಗಿರುವುದೇನು? ಎನ್ನುವ ಆಲೋಚನೆಯೇ ನನಗೆ ದಿಗ್ಭ್ರಮೆ ಹಿಡಿಸಿತ್ತು.

ನಾನು ಆವರನ್ನು ತಡೆಯಬಹುದಿತ್ತು, ಅಥವಾ ಅವರ ಕೈಯಿಂದ ಚಾಕುವನ್ನು ಕಿತ್ತುಕೊಳ್ಳಬಹುದಿತ್ತು. ತಮ್ಮ ಸಂತತಿಯ ಬಗ್ಗೆ ತಂದೆಗೆ ದೇವರು ಮಾಡಿದ್ದ ವಾಗ್ದಾನಗಳ ವಿಷಯವನ್ನು ನಾವು ಬಹಳ ಹೊತ್ತು ಚರ್ಚಿಸಿದೆವು. ತಂದೆಯು ಆಕಾಶದ ನಕ್ಷತ್ರಗಳಷ್ಟು, ಸಮುದ್ರ ತೀರದ ಉಸುಬಿನಷ್ಟು ಅಸಂಖ್ಯವಾದ ಸಂತತಿಯನ್ನು ಹೊಂದಲಿದ್ದರು. ನಾವಿಬ್ಬರೂ ಅರ್ಥಮಾಡಿಕೊಂಡು ವಿಶ್ವಾಸವಿಟ್ಟಿದ್ದ ಪುನರುತ್ಥಾನದ ಬಗೆಗೂ ಮಾತಾಡಿದೆವು. ಬಹುಶಃ ನಾನು ಬಲಿಪಶುವಾಗಿ ಸತ್ತನಂತರ ದೇವರು ನನ್ನನ್ನು ಪುನರುತ್ಥಾನಗೊಳಿಸಿಯಾನೋ? ಕೊನೆಗೆ ಭಾರವಾದ ಹೃದಯಗಳಿಂದ ದೇವರ ಈ ಆಜ್ಞೆಗೆ ಬಲವಾದ ಕಾರಣಗಳಿರಬೇಕೆಂದು ತೀರ್ಮಾನಸಿದೆವು. ಮತ್ತು ನಾನು ದೇವರ ಚಿತ್ತವನ್ನು ನೆರವೇರಿಸಲು ಮುಂದಾದೆ.



## ಪೊದೆಯಲ್ಲಿನ ಟಗರು :–

ನಾವು ಒಟ್ಟಿಗೆ ಈ ಕಾರ್ಯಕ್ಕೆ ಮುಂದುವರೆದೆವು. ಕಟ್ಟಿಗೆಗೆ ನನ್ನನ್ನು ಬಿಗಿಯಲು ತಂದೆಗೆ ನಾನು ಅವಕಾಶವಿತ್ತೆ. ನನಗೆ ಹೆಚ್ಚು ನೋವಾಗಬಾರದೆಂಬ ಉದ್ದೇಶದಿಂದ ವಿಶೇಷವಾಗಿ ಸಾಣೆ ಹಿಡಿದಿದ್ದ ಕತ್ತಿಯನ್ನು ಅವರು ಎತ್ತಿದರು. ಬಹಳ ಹೆದರಿಕೆಯಾದರೂ ಅವರನ್ನು ಕಂಗೆಡಿಸಬಾರದೆಂದು ಶಾಂತನಾಗಿ ಅವರ ದುಃಖತಪ್ತ ಶರೀರವನ್ನೂ, ಕಣ್ಣೀರಿನಿಂದ ತೋಯ್ದ ಮುಖವನ್ನು ನೋಡುತ್ತಿದ್ದೆ. ಆಗ ಅದು ನಡೆಯಿತು, ನಾವಿಬ್ಬರೂ ಅದನ್ನು ಕೇಳಿದೆವು– ಆಗ್ರಹಪೂರ್ವಕವಾದ ಆ ಉಚ್ಛಸ್ವರ– “***ಅಬ್ರಹಾಮನೇ, ಇಸಾಕನನ್ನು ಕೊಲ್ಲಬೇಡ, ಅವನಿಗೆ ಯಾವ ಕೇಡನ್ನು ಮಾಡದಿರು***” ನನ್ನ ತಂದೆಯು ಆಘಾತವಾದವರಂತೆ ಅದುರಿಬಿದ್ದರು. ಈಗ ಆ ಆಜ್ಞೆಯು ಮತ್ತೊಮ್ಮೆ ಕೇಳಿಸಿತು. ಈ ಬಾರಿ ನಾವು ಆ ದೇವದೂತನನ್ನು ಕಂಡೆವು.



“ನಿನ್ನ ಮಗನಿಗೆ ಹಾನಿಮಾಡಬೇಡ, ನಿನಗೆ ಅಮೂಲ್ಯವೆಂದು ನೀನೆಣಿಸುವುದನ್ನೆಲ್ಲಾ ನಿಜವಾಗಿಯೂ ದೇವರಿಗೆ ಸಮರ್ಪಿಸ ಬಲ್ಲೆಯೆಂಬುದು ದೇವರಿಗೆ ತಿಳಿಯಬಂದಿದೆ”.

ದೇವರು ಯಜ್ಞದ ಪಶುವನ್ನು ಒದಗಿಸಿಯೇ ಇದ್ದರು. ಹತ್ತಿರದಲ್ಲಿಯೇ ಒಂದು ಟಗರು ಕೊಂಬುಗಳು ಪೊದೆಯಲ್ಲಿ ಸಿಕ್ಕಿಕೊಂಡು ಹೊರಬರಲಾರದೆ ಇತ್ತು. ಆ ಟಗರು ಯಜ್ಞವೇದಿಯ ಮೇಲೆ ಅರ್ಪಣೆಯಾಗುತ್ತಿದ್ದಂತೆ ನನಗೆ ಹೇಗೆನಿಸಿರಬಹುದು ಎನ್ನುವುದನ್ನು ನೀವು ಊಹಿಸಿಕೊಳ್ಳಬಹುದು.

ದೇವರು ಮಾಡಿದ ಈ ವ್ಯವಸ್ಥೆಯ ಅರ್ಥವು–ನಾನು ಒದಗಬಹುದು, ಸಾಯಬೇಕಿಲ್ಲ ಎಂದಾಗಿತ್ತು. ಪರ್ವತದ ಮೇಲಿನ ಈ ಅನುಭವಗಳು ನನ್ನನ್ನು ಈ ಸರ್ವಶಕ್ತ ಮತ್ತು ಪ್ರೀತಿಮಯ ದೇವರೊಂದಿಗಿನ ನನ್ನ ಸಂಬಂಧದ ಬಗ್ಗೆ ಆಳವಾಗಿ ಯೋಚಿಸುವಂತೆ ಮಾಡಿತು. ನಾನು ದೇವರ ಯೋಜನೆಗಳಲ್ಲಿ ಒಂದು ವಿಶೇಷ ಉಪಕರಣವೇ ಆಗಿದ್ದರೆ, ಅವನನ್ನು ಇನ್ನೂ ಚೆನ್ನಾಗಿ ಅರಿತುಕೊಳ್ಳುವುದರ ಅಗತ್ಯವಿದೆ. ಈ ಘಟನೆಗೆ ಇನ್ನಾವುದೋ ಸಾಂಕೇತಿಕ ಅರ್ಥವಿರಬಹುದು, ನನಗೆ ಗೊತ್ತಿಲ್ಲ. ತಂದೆ ಈಗ ಭಾರಮುಕ್ತರಾಗಿದ್ದರು, ಆದರೆ ತಾಯಿಗೆ ವಿವರಣೆ ಕೊಡಬೇಕಾದ ಸಂಗತಿಗಳಿದ್ದವು.

ಒಂದು ವಿಷಯವನ್ನು ನಾನು ಆ ದಿನದಲ್ಲಿ ಚೆನ್ನಾಗಿ ತಿಳಿದುಕೊಂಡೆ; ದೇವರಲ್ಲಿ ವಿಶ್ವಾಸವಿಟ್ಟು ಆತನ ಅಪ್ಪಣೆಯನ್ನು ಪಾಲಿಸುವುದು ಕಷ್ಟಕರವಾಗಿರಬಹುದು, ಆದರೆ ಪೂರ್ಣಪ್ರತಿಫಲ ಉಳ್ಳದ್ದು.

**–ಸಿಂಥಿಯಾ ಮೈಲ್ಸ್**

**(ಆದಿಕಾಂಡ 22ನೇ ಅಧ್ಯಾಯವನ್ನು ಓದಿ)**